ಅ) ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ನಿಟ್ಟಿನಲ್ಲಿ ವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಲಾಗುತ್ತಿದ್ದು, ಈ ವ್ಯಂದ ಮತ್ತು ನೇಮಕಾತಿ ನಿಯಮಾವಳಿಯನ್ನು ರಚಿಸಿದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.ಈ ಮಧ್ಯೆ ನಿರ್ದೇಶಕರು, ಆರೋಗ್ಯ ಮತ್ತು ಕುಕ. ಸೇವೆ ಇವರನ್ನು · ಕೋರಿದ್ದು ಸದರಿ ನಿರ್ದೇಶನಾಲಯವು ಗ್ರೂಪ್ 'ಸಿ' ಹುದ್ದೆಗಳು ಅರ್ಜಿ ಅಭ್ಯರ್ಥಿಗಳಿಂದ ಪದೋನ್ನತಿಯಿಂದ ಭರ್ತಿ ಮಾಡುತ್ತದೆ. ಈ ಪದೋನ್ನತಿಯಿಂದ ಖಾಲಿ ಬಿದ್ದ ಹುದ್ದೆಗಳಿಂದ ನೇರ ನೇಮಕಾತಿಯಿಂದ ಕಾಲಕಾಲಕ್ಕೆ ಭರ್ತಿ ಮಾಡಲು ಕ್ರಮ ಜರುಗಿಸುವುದು. ಖಾಲಿ ಇರುವ ಗ್ರೂಪ್ 'ಡಿ' ದರ್ಜೆ ನೌಕರರ ಹುದ್ದೆಗಳನ್ನು ಭರ್ತಿ ಮಾಡುವ ಬದಲಾಗಿ ಆಸ್ಪತ್ರೆಯ ನೈರ್ಮಲ್ಯತೆ ಮತ್ತು ಭದ್ರತಾ ಸಿಬ್ಬಂದಿಯ ಕೆಲಸಗಳನ್ನು ಗುತ್ತಿಗೆಯಾಧರದ ಮೇಲೆ ಖಾಸಗೀ ಸಂಸ್ಥೆಗಳಿಗೆ ವಹಿಸಲು ಸರ್ಕಾರವು ಆದೇಶವನ್ನು ಬಿಡುಗಡೆ ಮಾಡಲಾಗಿದೆ.

ವೈದ್ಯಕೀಯ ಕಾಲೇಜುಗಳ ಬೋಧಕ ಸಿಬ್ಬಂದಿ ಕೊರತೆ.

59(415) **ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ)** :—ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವೈದ್ಯಕೀಯ ಕಾಲೇಜುಗಳಿಗೆ ಬೋಧಕ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬೋಧಕ ಸಿಬ್ಬಂದಿಯ ನೇಮಕಾತಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಗ್ರಾಮೀಣ ಆಸ್ಪತ್ರೆಗಳ ವೈದ್ಯರುಗಳ ನೇಮಕಾತಿಯ ನಿಯಮಗಳನ್ವಯ ವೈದ್ಯಕೀಯ ಕಾಲೇಜಿನ ಬೋಧಕ ಸಿಬ್ಬಂದಿಯನ್ನು ಸಹ ನೇಮಕಾತಿ ಮಾಡಲಾಗುವುದೇ?

ಡಾ : ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಹೌದು

ಆ) ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಖಾಲಿ ಇರುವ

ಪ್ರಾಧ್ಯಾಪಕರ ಹುದ್ದೆಗಳನ್ನು ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ಮುಂಬಡ್ತಿ ನೀಡಿ ತುಂಬಲಾಗಿದೆ. ಮುಂಬಡ್ತಿ ಕೋಟಾದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸಹ ಅರ್ಹ ಉಪನ್ಯಾಸಕರುಗಳಿಗೆ ಮುಂಬಡ್ತಿ ನೀಡಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವಂತೆ ಲೋಕಸೇವಾ ಆಯೋಗವನ್ನು ಕೋರಲಾಗುತ್ತಿದೆ.

ಇ) ಇಲ್ಲ.

ಕೆ.ಆರ್. ಆಸ್ಪತ್ರೆಗೆ ವೆಂಟಿಲೇಟರ್ ಸಿಸ್ಪಮ್ ಸರಬರಾಜು ಮಾಡಿರುವ ಬಗ್ಗೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಆರ್. ಆಸ್ಪತ್ರೆಗೆ ಆರು ವೆಂಟಿಲೇಟರ್ ಸಿಸ್ಪಮ್‌ಗಳನ್ನು ಸರಬರಾಜು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರಬಾರಾಜು ಆಗಿರುವ ವೆಂಟಿಲೇಟರ್‌ಗಳಿಗೆ ಕಂಪ್ರೆಸರ್‌ಗಳನ್ನು ಬೇರೆ ಕಂಪನಿಯಿಂದ ಖರೀದಿಸಿರುವ ಉದ್ದೇಶವೇನು?

ಇ) ಈ ರೀತಿ ಸರಬರಾಜಾಗಿರುವ ಬೇರೆ ಬೇರೆ ಕಂಪನಿಗಳ ಯಂತ್ರಗಳ ಜೋಡಣೆ ಸಾಧ್ಯವೇ?

ಈ) ಹಾಗಿಲ್ಲದಿದ್ದಲ್ಲಿ ಅದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನು ವಸೂಲಿ ಮಾಡಲಾಗುವುದೇ?

ಡಾ : ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು, 1994-95 ಹಾಗೂ 1995-96 ನೇ ಸಾಲಿನಲ್ಲಿ 5 ವೆಂಟಿಲೇಟರ್ ಕೊಳ್ಳಲು ಸರ್ಕಾರಿ ಆದೇಶ ನೀಡಲಾಗಿತ್ತು. ಅದರಂತೆ 1996-97ನೇ ಸಾಲಿನಲ್ಲಿ ಕೆ.ಆರ್. ಆಸ್ಪತ್ರೆ, ಮೈಸೂರು ಇಲ್ಲಿಗೆ ಒಟ್ಟು 5 ವೆಂಟಿಲೇಟರ್‌ಗಳನ್ನು ಸರಬರಾಜು ಮಾಡಲಾಗಿದೆ.

ಆ) ಕೆ.ಆರ್. ಆಸ್ಪತ್ರೆಗೆ ಸರಬರಾಜು ಮಾಡಲಾದ ವೆಂಟಿಲೇಟರಗಳು ಕಂಪ್ರೆಸರ್‌ಗಳನ್ನು ಒಳಗೊಂಡಿರಲಿಲ್ಲ. ವೆಂಟಿಲೇಟರ್‌ಗಳನ್ನು ಕಾರ್ಯರೂಪಕ್ಕೆ ತರಲು ಕೇಂದ್ರೀಕೃತ ಕಂಪ್ರೆಸರ್